ದಿನಾಂಕಃ 26.07.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)
ಪ್ರಾ.ಸಾಃ 1

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿಎಸ್‌ಎಸ್., ವಕೀಲರಿಂದಃ

2. ಬೆಳಕೆರೆ ಗ್ರಾಮದಲ್ಲಿ ನಾನು ವಾಸವಾಗಿದ್ದೇನೆಂದು ತೋರಿಸಲು ನನ್ನ ಬಳಿ ದಾಖಲೆಗಳಿವೆ. ಆ ಬಗ್ಗೆ ನಿಮ್ಮ ಬಳಿ ಯಾವುದೇ ದಾಖಲಾತಿಗಳು ಇಲ್ಲ ಅಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ಬಳಿ ಪಡಿತರ ಚೀಟಿ ಇಲ್ಲ. ಬೇರೆ ದಾಖಲಾತಿಗಳಿವೆ.

3. ಸುಮಾರು ವರ್ಷಗಳ ಹಿಂದೆ ನೀವು ಬೆಂಗಳೂರಿಗೆ ಹೋಗಿ ವಾಸವಾಗಿದ್ದೀರಿ ಅಂದರೆ ಸರಿ. ಈಗಲೂ ಸಹ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ ಅಂದರೆ ಸರಿಯಲ್ಲ.

4. ನಿಮ್ಮ ತಂದೆ ಯಾವ ಕಾರಣದಿಂದ ಮರಣ ಹೊಂದಿದರು ಅಂದರೆ ಸಾಕ್ಷಿ ಆ ದಿನ ನಾನು ಮನೆಯಲ್ಲಿ ಇರಲಿಲ್ಲ. ನಿಮ್ಮ ತಂದೆ ಮರದಿಂದ ಬಿದ್ದು ಪೆಟ್ಟು ಮಾಡಿಕೊಂಡಿದ್ದರು ಅಂದರೆ ಸರಿ. ನಿಮ್ಮ ತಂದೆಯ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು 2 ನೇ ಪ್ರತಿವಾದಿ ಮತ್ತು ಅವರ ಗಂಡ ನಿರ್ವಹಿಸಿದ್ದಾರೆ ಅಂದರೆ ಸರಿಯಲ್ಲ. ನನ್ನ ತಾಯಿ ವಾಸವಾಗಿರುವ ಮನೆ ಶಿಥಿಲಾವ್ಯವಸ್ಥೆಯಲ್ಲಿದ್ದಾಗ 2 ನೇ ಪ್ರತಿವಾದಿ ಮತ್ತು ಅವರ ಗಂಡ ದುರಸ್ತಿ ಮಾಡಿಸಿದ್ದಾರೆ ಅಂದರೆ ಸರಿಯಲ್ಲ.

5. 2 ನೇ ಪ್ರತಿವಾದಿ ಮತ್ತು ಅವರ ಗಂಡ ಈ ಎಲ್ಲಾ ಖರ್ಚು ವೆಚ್ಚ ಮಾಡಿದ್ದ ಕಾರಣ ನಾನು ಮತ್ತು ನನ್ನ ತಾಯಿ ದಾವಾ ಷಡ್ಯೂಲ್ ಐಟಂ 1 ನ್ನು 2 ನೇ ಪ್ರತಿವಾದಿಗೆ ನಿಪಿ.3 - ದಾನದ ಪತ್ರದ ಮೂಲಕ ನೀಡಿದ್ದೇವೆ ಅಂದರೆ ಸರಿಯಲ್ಲ. ಸದರಿ ನಿಪಿ.3 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಾನು ಸಾಕ್ಷಿಯಾಗಿ ಸಹಿ ಮಾಡಿರುವ ಕಾರಣ ಈಗ ನನಗೆ ಓದಲು, ಬರೆಯಲು ಬರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

6. ಈಗಾಗಲೇ ಮಾಡಿರುವ ಪಾಟೀ ಸವಾಲಿನಲ್ಲಿ ಹೇಳಿರುವ ಸರ್ವೆ ನಂಬರ್‌ಗಳ ಸ್ವತ್ತುಗಳ ಮೇಲೆ ಪರಿಹಾರ ಕೇಳದೆ, ದಾವಾ ಷಡ್ಯೂಲ್ ಸ್ವತ್ತುಗಳ ಮೇಲೆ ಪರಿಹಾರ ಕೇಳಲು ಬರುವುದಿಲ್ಲ ಅಂದರೆ ಸಾಕ್ಷಿ ದಾವಾ ಷಡ್ಯೂಲ್ ಸ್ವತ್ತುಗಳು ಹೊರುತಪಡಿಸಿ ಬೇರೆ ಯಾವುದೇ ಒಟ್ಟು ಕುಟುಂಬದ ಆಸ್ತಿ ಇಲ್ಲ.

7. ನನ್ನ ತಂದೆ ಬದುಕಿದ್ದ ಕಾಲದಲ್ಲಿ ಅವರ ಅಣ್ಣನಿಂದ ಒಂದು ಸ್ವತ್ತನ್ನು ಖರೀದಿ ಮಾಡಿದ್ದಾರೆ ಅಂದರೆ ಆ ವಿಚಾರ ನನಗೆ ಗೊತ್ತಿಲ್ಲ. ದಾವಾ ಷಡ್ಯೂಲ್ ಸ್ವತ್ತುಗಳ ಬಗ್ಗೆ ಮಾತ್ರ ಗೊತ್ತಿದೆ ಸದರಿ ಸ್ವತ್ತನ್ನು ನಿಮ್ಮ ತಂದೆ ಅವರ ಅಣ್ಣನಿಂದ ಖರೀದಿ ಮಾಡಿದ ನಂತರ ನಿಮ್ಮ ತಂದೆಯ ಅಣ್ಣ ಮಂಡ್ಯಕ್ಕೆ ಹೋಗಿ ವಾಸವಾಗಿದ್ದಾರೆ ಅಂದರೆ ನನಗೆ ಗೊತ್ತಿಲ್ಲ.

8. ನನ್ನ ಭಾಗಕ್ಕೆ ಬಂದಂತಹ 20 ಗುಂಟೆ ಜಮೀನಿನಲ್ಲಿ ನನ್ನ ಅತ್ತೆ ವ್ಯವಸಾಯ ಮಾಡಿಸುತ್ತಿದ್ದಾರೆ ಅಂದರೆ ಇಲ್ಲ, ದಾವಾ ಷಡ್ಯೂಲ್ ಸ್ವತ್ತುಗಳು ಹೊರತುಪಡಿಸಿ, ಬೇರೆ ಯಾವುದರ ಬಗ್ಗೆ ನನಗೆ ಗೊತ್ತಿಲ್ಲ.

9. ನಾನು ನಮ್ಮ ಗ್ರಾಮದಲ್ಲಿಯೇ 4 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ ಅಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಮತ್ತು ಎಲ್ಲಾ ಸ್ವತ್ತುಗಳ ಬಗ್ಗೆ ಗೊತ್ತಿದ್ದರೂ ಸಹ 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈಗ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ
ಚನ್ನಪಟ್ಟಣ.